ಕೈಮಗ್ಗ ಅಭಿವೃದ್ಧಿ ನಿಗಮದಿಂದ ನೇಕಾರರಿಗೆ ನೂಲು ವಿತರಣೆ.

477 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ನೇಕಾರರಿಗೆ ವೇಳೆಗೆ ಸರಿಯಾಗಿ ಸಮರ್ಪಕವಾಗಿ ನೂಲು ವಿತರಣೆ ಮಾಡುವಲ್ಲಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಒಂದು ವೇಳೆ ಸಮರ್ಪಕವಾಗಿ ನೂಲು ಪೂರೈಕೆಯಾಗದಿದ್ದಲ್ಲಿ, ನೂಲು ಸರಿಯಾಗಿ ಪೂರೈಸಲು ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಬಂದಿದೆ.

ಆ) ಕರ್ನಾಟಕ ರಾಜ್ಯದಲ್ಲಿ ಕೇವಲ 3 ಅಥವಾ 4 ನೂಲಿನ ಗಿರಣಿಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದು, ಈ ಗಿರಣಿಗಳು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೂಲಿನ ಪೂರ್ಣ ಅವಶ್ಯಕತೆಯನ್ನೂ ಪೂರೈಸುತ್ತಿಲ್ಲ. ಆದ್ದರಿಂದ ನಿಗಮವು ತಮಿಳುನಾಡಿನ ಸಹಕಾರ ನೂಲಿನ ಗಿರಣಿಗಳಿಂದ ನೂಲನ್ನು ಖರೀದಿಸುತ್ತಿದೆ. ಆದರೆ ನೂಲಿನ ಗಿರಣಿಗಳು ಸಾಲದ ಆಧಾರದ ಮೇಲೆ ನೂಲನ್ನು ಸರಬರಾಜು ಮಾಡಲು ನಿರಾಕರಿಸುತ್ತಿದ್ದು, ಹಣ ವಾಪತಿ ಮಾಡಿದ ನಂತರವೇ ನೂಲನ್ನು ಸರಬರಾಜು ಮಾಡುತ್ತಿವೆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ದಾಸ್ತಾನು ಪ್ರಮಾಣ ಏರುತ್ತಿದ್ದು, ಜನತಾ ಬಟ್ಟೆಗಳ ಮಾರಾಟ ನಿಧಾನಗತಿಯಿಂದ ಸಾಗುತ್ತಿರುವುದರಿಂದಲೂ ಮತ್ತು ಸಗಟು ಮಾರಾಟಗಾರರಿಂದ ಹಣ ಪಾವತಿ ವಿಳಂಬವಾಗುತ್ತಿರುವುದರಿಂದ, ನಿಗಮದಲ್ಲಿ ಹಣದ ಕೊರತೆ ಉದ್ಭವವಾಗಿರುತ್ತದೆ. ನಿಗಮದವರು ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸದಿರುವುದು ಇದಕ್ಕೆ ಮುಖ್ಯ ಕಾರಣವಾಗಿದ್ದು, ಸರ್ಕಾರವು ಈಗಾಗಲೇ ಉತ್ಪಾದನಾ ಗುಣಮಟ್ಟವನ್ನು ಉತ್ತಮಗೊಳಿಸಲು ನಿಗಮಕ್ಕೆ ಸೂಚನೆ ನೀಡಿರುತ್ತದೆ. ಹಾಗೂ ಕರ್ನಾಟಕಕ್ಕೆ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೀಡಬೇಕಾದ ಹಣವನ್ನು ಸರ್ಕಾರ ಮುಂಗಡವಾಗಿ ನೀಡಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ನಿಗಮದ ಆರ್ಥಿಕ ಪರಿಸ್ಥಿತಿ ಸುಧಾರಿಸಿ, ನೇಕಾರರಿಗೆ ನಿರಂತರವಾಗಿ ನೂಲು ಸರಬರಾಜು ಮಾಡುವ ಸಾಧ್ಯತೆ ಇರುತ್ತದೆ.

ರಾಜ್ಯದಲ್ಲಿ ಜಪಾನ್ ಕೈಗಾರಿಕಾ ಕೇಂದ್ರದ ನಿರ್ಮಾಣ.

637 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಜಪಾನ್ ಸರ್ಕಾರದವರು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿರುವುದು ನಿಜವೇ?*

ಆ) *ಹಾಗಿದ್ದಲ್ಲಿ ಇದನ್ನು ಎಲ್ಲಿ ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು?*

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಜಪಾನ್ ಮತ್ತು ಭಾರತ ಸರ್ಕಾರದ ಪರಸ್ಪರ ಸಹಯೋಗದ ಒಪ್ಪಂದದ ಮೇರೆಗೆ ಭಾರತ ದೇಶದಲ್ಲಿ ಒಂದು ಮಾದರಿ ಕೈಗಾರಿಕಾ ನಗರವನ್ನು ಸ್ಥಾಪನೆ ಮಾಡಲು ಉದ್ದೇಶಿಸಿದೆ. ಈ ಮಾದರಿ ಕೈಗಾರಿಕಾ ನಗರದ ಸ್ಥಾಪನೆಯ ಯೋಜನೆಯನ್ನು ತಯಾರಿಸಲು ಜಪಾನ್ ಸರ್ಕಾರ ಒಪ್ಪಿಕೊಂಡಿದೆ.